

# ಎಮ್ಮವರು ಬೆಸಗೊಂಡಡೆ

■ ಸದಾಶಿವ ಸೊರಟೂರು
ಕಲೆ: ಶಶಿಧರ ಹಳೇಮನಿ

ನಾನು ಮದುವೆ ಮಾಡಿಕೊಳ್ಳಿ ಮಮ್ಮಿ ಅಂದ್ರೂ ಅಮ್ಮ ಮಾಡಿಕೊಳ್ಳಲಿಲ್ಲ. ನಾನು ಅಡ್ಡವಾದೆನಾ? ಇಲ್ಲದ ಅಪ್ಪ ಅಡ್ಡವಾದರಾ? ಅಪ್ಪನ ಒಳ್ಳೆಯ ಹೆಸರು ಅಡ್ಡವಾಯಿತಾ? ಇಲ್ಲದವರು ಹೀಗೆ ಅಡ್ಡವಾಗುವುದು ಯಾವ ನ್ಯಾಯ? ಆ ನನ್ನ ಹುಡುಗ ಎಷ್ಟು ಆತ್ಮೀಯನಾಗಿದ್ದಾನೆ. ಎಷ್ಟೊಂದು ಕಾಳಜಿ ಮಾಡುತ್ತಾನೆ. ಆದರೆ ಅದು ಒಳ್ಳೆಯದಾಗಲಾರದೆ?

ಅರ್ಧ ಮುಚ್ಚಿದ ಮೋಡದೊಳಗೆ ಸಿಕ್ಕಿ ಹಾಕಿಕೊಂಡಿದ್ದ ಚಂದ್ರ ಆಚೆ ಬರಲು ಹೆಣಗಾಡುತ್ತಿದ್ದ. ಭೂಮಿಗೆ ಮಂಪರು ಬೆಳಕು. ರಾತ್ರಿ ಹನ್ನೆರಡು ಕಳೆದಿದೆ. ನಕ್ಷತ್ರಗಳು ಒಂದು ಸುತ್ತು ತೂಕಡಿಸಿ ಎದ್ದಿವೆ. ಅವಳ ರೂಮಿನಲ್ಲಿ ಮಿಣ ಮಿಣ ಬೆಳಕು, ತೆಳು ನೀಲಿಯದು. ಅದರ ಪಕ್ಕದ ರೂಮಿನಲ್ಲೂ ಅಂಥದ್ದೆ ಬೆಳಕು. ಅದು ಇದಕ್ಕಿಂತ ತುಸು ಗಾಢ ನೀಲಿಯದು. ಎರಡೂ ರೂಮಿಗೂ ನಡುವೆ ಒಂದು ಗೋಡೆ ಅಡ್ಡ ಇದೆ. ಆ ರೂಮಿನದು ಆ ರೂಮಿಗಷ್ಟೇ ಬೆಳಕು; ಅವರ ಅವರ ಎದೆಯ ನೋವು ಅವರವರನ್ನು ಹಿಂಡುವಂತೆ. ರೂಮಿನಿಂದ ತಪ್ಪಿಸಿಕೊಂಡು ಕಿಟಕಿ ಮೂಲಕ ಆಚೆ ಹೋದ ಬೆಳಕನ್ನು ಆ ಮಧ್ಯ ರಾತ್ರಿಯಲ್ಲಿ ಕದ್ದು ನೋಡುವವರು ಯಾರು?

1

ಇತ್ತ ಈ ರೂಮಿನ ಇವಳು... ಮೆಲ್ಲನೆ ಡೈರಿ ಆಚೆ ತೆಗೆದಳು, ಎಲ್ಲೂ ಬಿಚ್ಚಿಡದ ತನ್ನ ಮನಸ್ಸನ್ನು ತೆರೆದಿಡುವಂತೆ! ಅರಾಮು ಕುರ್ಚಿಯಲ್ಲಿ ಕೂತು ಒಮ್ಮೆ ಉಸಿರು ಬಿಟ್ಟು ಉಸಿರು ತೆಗೆದುಕೊಂಡಳು. ತೋರು ಬೆರಳು ಡೈರಿಯ ಪುಟಗಳನ್ನು ಒಂದೊಂದೆ ತೆರೆಯಿತು. ಇಂದು ಅವಳಿಗೇನೊ ಬರೆಯುವುದಕ್ಕಿದೆ. ಬರೆದು ಮುಗಿಸಿ ನಿರಾಳವಾಗುವುದಕ್ಕೆ ಕಾದಿದ್ದಾಳೆ. ಬೆರಳ ತುದಿಯಲ್ಲಿ ಚಡಪಡಿಕೆ ಕುಣಿಯುತ್ತಿದೆ. ಒಮ್ಮೊಮ್ಮೆ ಅವಳು, ಹೀಗೆಯೇ ಅವಳಿಗೆ ಅವಳೇ ಅರ್ಥವಾಗದಂತೆ; ಭಯಂಕರ ನಿಗೂಢದಂತೆ. ಮೆಲ್ಲನೆ ಡೈರಿಯ ಪುಟಗಳು ಬಿಚ್ಚಿಕೊಂಡವು. ಪೆನ್ನು ಎತ್ತಿಕೊಂಡಳು. ಬಿಳಿ ಹಾಳೆಯ ಮೇಲೆ ಪದಗಳ ಓಟ.

ದಿನಾಂಕ: 16–02–2023, ಗುರುವಾರ. 12:05 ಎ.ಎಂ. ಇಂದು ಅಲಮಾರು ತೆಗೆದಾಗ ಇಷ್ಟು ದಿನ ಅನಿಸದೇ ಇದದ್ದು ಇಂದು ಅನಿಸಿಬಿಟ್ಟಿತು. ಒಂದು ಜೋಡಿ ಚಪ್ಪಲಿಗಳು ಮತ್ತು ಒಂದು ಜೊತೆ ಪ್ಯಾಂಟು, ಅಂಗಿ. ಇವು ಅವರು ತೊಟ್ಟ ಕೊನೆಯ ಉಡುಗೆಗಳು. ಅದರಲ್ಲಿ ಅವರ ಕೊನೆಯ ಉಸಿರಿತ್ತು. ಕೊನೆಯ ಬೆವರು, ಬಹುಶಃ ಕೊನೆಯ ಆಸೆಯೂ! ನನ್ನ ಬಟ್ಟೆಯ ಜಾಗದಲ್ಲೇ ಅವುಗಳನ್ನೂ ಇಟ್ಟುಕೊಂಡಿದ್ದೆ. ದಿನಕ್ಕೊಮ್ಮೆಯಾದರೂ ಅವುಗಳನ್ನು ಮುಟ್ಟುತ್ತಿದ್ದೆ. ಅವರೆಷ್ಟು ಪ್ರೀತಿಸಿದರು ನನ್ನನ್ನು ಮತ್ತು ಈ ಬದುಕನ್ನು!.